ಅಕ್ಕಿ ಇತ್ಯಾದಿ ದಿನ ನಿತ್ಯದ ಸಾಮಾನು ಇದೆಯೊ ಇಲ್ಲವೊ ಕೇಳುತ್ತಿರಲಿಲ್ಲ. ಗೋಪಾಲ ಪೈ ಅವರ ಅಂಗಡಿಗೆ ಹೋಗಿ ಉದ್ರಿ ಸಾಮಾನು ತರುವುದು. ಅವರು ಎಲ್ಲರಿಗೂ ಕೊಟ್ಟಾದ ಮೇಲೆ ಸಣ್ಣ ವ್ಯಂಗ್ಯ ಮಾಡುತ್ತ ಕೊಡುತ್ತಿದ್ದರು. ಬಟ್ಟೆ ಬರೆ ತರದೆ ವರ್ಷಗಟ್ಟಲೆ ಆಗಿತ್ತು. ಮಳೆಗಾಲ ಬಂದಾಗ ಕೊಡೆ ಇರಲಿಲ್ಲ. ಇದ್ದಬಿದ್ದ ಹರಕು ಮುರುಕು ಕೊಡೆಯನ್ನು ಧಾರಾಕಾರ ಮಳೆಗೆ ಒಡ್ಡಲಾಯಿತು. ಹಿಂದೆಲ್ಲ ಮಳೆಗಾಲ ಶುರುವಾಗುತ್ತಿದ್ದಂತೆ, ಹೊಸ ಕೊಡೆ, ಪರಿಮಳದ ಪುಸ್ತಕ, ಪಟ್ಟಿ, ಕಂಪಾಸು, ಆಳುಗಳಿಗೆ ಕಂಬಳಿ ಎಲ್ಲ ಬರುತ್ತಿತ್ತು. ಇಷ್ಟೆಲ್ಲ ಉರಾವರಿಯಿಂದ ತಿರುಗಿದ, ದೊಡ್ಡವರು ಎಂದು ಕೊಚ್ಚಿಕೊಂಡ ಮನೆಯವರಿಗೆ ಗನಾದೊಂದು ಕೊಡೆಯಿರಲಿಲ್ಲ. ಬಿಕ್ಕೆ ಬೇಡುವವರು ಬಂದರೆ ಕೊಡಲು ದಮ್ಮಡಿ ಇಲ್ಲದ ಸ್ಥಿತಿ. ನೆರೆ ಕೇರಿಯಲ್ಲಿ ಮುಖ ತೋರಿಸಲು ಒಂದು ನಮೂನೆಯಾಗುವಂತಹ ಸ್ಥಿತಿ.

ಅದರ ಜೊತೆ, ಜನ ಗಟ್ಟಿಯಾಗಿಯೇ ಅಂದುಕೊಳ್ಳತೊಡಗಿದ್ದರು: 'ಅಲ್ಲಿ ಇಷ್ಟು ಕಳೆದನಂತೆ, ಇಲ್ಲಿ ಇಷ್ಟು ಕಳೆದನಂತೆ, ಹೀಗೆ ಆಡುವುದು ಕುಡಿಯುವುದು ಮಾಡಿದರೆ ಪೂರ್ತಿ ಚೊಕ್ಕಾಗಿ ಮನೆ ಮಾರಲು ಹೆಚ್ಚು ದಿನ ಬೇಡ' ಎಂದು. ಸಂಜೆ ಅಂಗಡಿ ಬದಿಗೆ ಹೋದರೆ, ಪಕ್ಕದ ಮನೆಯವನೊಬ್ಬ ಹೆಗಡೆಯವರ ಹಿರಿಯ ಮಗ ಶಾಂತಾರಾಮನನ್ನು ಹತ್ತಿರ ಕರೆದು, 'ನಿನ್ನ ಹತ್ತಿರ ಏನೋ ಹೇಳೊ ಮಾಡಿದ್ದೆ... ನಿನ್ನೆ ನಿನ್ನ ಅಪ್ಪ ಹೊನ್ನಾವರದ ಹೈವೆ ಹೋಟೆಲ್ ಹತ್ತಿರ ಸಿಕ್ಕಿದ್ನಡ, ಫುಲ್ ಟೈಟ್ ಆಗಿದ್ನಡ, ನಿಂತಕಂಬ್ಲೆ ಆಗ್ತಿತಿಲ್ಯಡ...' ಎನ್ನುತ್ತಿದ್ದ. ಮತ್ತೊಬ್ಬ, 'ಆ ದಿನ ನಿಮ್ಮ ಅಪ್ಪನೊರು ಸಿಕ್ಕಿರು. ದುಡ್ಡ ಅದ್ಯನೊ ಕೇಳಿದರು, ನಾ ಹೊನ್ನಾವರಕೆ ಹೋಗುಕೆ ಉಪ್ಪೋಣಿಲಿ ಬಸ್ ಕಾಯ್ತಾ ನಿಂತಿದ್ದೆ. ಎಷ್ಟಾಗ್ತಿತ್ರ? ಕೇಳ್ದೆ. ನಿನ್ನ ಹತ್ತಿರ ಎಷ್ಟದೆ? ಕೇಳಿದರು. ಸಾವರಾರು ಇರಬೇಕು ಎನ್ನುವುದರೊಳಗೆ ಕಿಸಿಗೆ ಕೈ ಹಾಕಿ ತಕಂಡರು. ಅಲ್ಲ, ಅವರು ತಕಂಡದ್ದಕ್ಕೆ ಹೇಳಿದ್ದಲ್ರ...' ಎನ್ನುತ್ತಿದ್ದ.

ಗದ್ದೆ ಮಾರಿದ್ದಾಯಿತು. ಒಂದೆಡೆ ಪಡಾಬಿದ್ದ ಜಮೀನಿತ್ತು, ಅದನ್ನೂ ಮಾರಿದ್ದಾಯಿತು. ಬಂದ ದುಡ್ಡಿನಲ್ಲಿ ಅಡವು ಇಟ್ಟ ಮದುವೆಯಾದ ಮಗಳ ಬಂಗಾರ ಬಿಡಿಸಲಾಯಿತು. ಮೈಮೇಲೆ ಬಂದ ಸಾಲ ಕೊಂಚ ಶಮನವಾಗಿ ತುಸು ನಿಟ್ಟುಸಿರು ಬಿಡುವಂತಾಯಿತು. ಆದರೆ ಇದು ರಾಶಿ ದಿನ ಉಳಿಯಲಿಲ್ಲ. ಕೆಲ ದಿನ ಬಿಟ್ಟು ತವರಿಗೆ ಬಂದ ಮಗಳು ಈ ವಿಷಯವನ್ನು ಹೇಳಿದಳು. ಅದನ್ನು ದೊಡ್ಡ ತಮ್ಮನನ್ನು ಬಿಟ್ಟು ಉಳಿದವರಲ್ಲಿ ಪಿಸುಗುಟ್ಟಿದಳು, 'ಮತ್ತೆ ಬಂಗಾರವನ್ನು ತೆಗೆದುಕೊಂಡು ಹೋಗಿದ್ದಾನೆ' ಎಂದು.

'ನೀನು ಯಾಕೆ ಕೊಟ್ಟೆ? ಒಮ್ಮೆ ಗೊತ್ತಾದ ಮೇಲೆ ಕೊಡಬಾರದಾಗಿತ್ತು' ಎಂದು ಕೊಂಚ ಬಿರುಸಾಗಿ ಕೇಳಿದ ಸಣ್ಣ ತಮ್ಮ ಶಂಭು.

'ಬಂದು ಅಳುತ್ತಾ ಕೂರುತ್ತಾನೆ, ಎಂತ ಮಾಡುವುದು, ಕೊಡುವುದಿಲ್ಲ ಎನ್ನಲಾಗಲಿಲ್ಲ' ಎಂದಳು.

'ನೋಡು, ನಾವು ಮತ್ತೆ ಬಿಡಿಸಿಕೊಡಲು ಸಾಧ್ಯವಿಲ್ಲ, ನಾಳೆ ನೀನು ಇಲ್ಲಿ ಬಂದು ಕೂತರೆ ಏನೂ ಮಾಡಲು ಆಗುವುದಿಲ್ಲ' ಎಂದ ಶಂಭು ಅಸಹಾಯಕನಾಗಿ.

'ನಾ ನಿಂಗಳ ಹತ್ತಿರ ಬಿಡಿಸಿ ಕೊಡುವ ಲೆಕ್ಕಕ್ಕೆ ಹೇಳಿದ್ದಲ್ಲ. ಅವನು ಮದುವೆಯಲ್ಲಿ ಹಾಕಿದ್ದು, ಅವನು ತಕಂಡ ಎಂದು ತಿಳಿದುಕೊಳ್ಳುತ್ತೇನೆ' ಎಂದಳು ಅವನನ್ನು ಸಮಾಧಾನ ಮಾಡುವ ದನಿಯಲ್ಲಿ.

ಮದುವೆಯಲ್ಲಿ ಹೆಗಡೆಯವರು ಮಗಳಿಗೆ ಹತ್ತು ತೊಲೆಯ ಬಂಗಾರದ ಆಭರಣ ಹಾಕಿದ್ದರು.